ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೨೯ ಫೆಬ್ರವರಿ ೨೦೨೪ ಸಂಚಿಕೆ ೩

ಪರೀಕ್ಷೆಗಳನ್ನು ಪಾಸು ಮಾಡಲು ಅಗತ್ಯವಾದ ಬೆಂಬಲ ನೀಡುವುದು ತೀರ ಆವಶ್ಯಕವಾಗಿದ್ದರೂ ನಿಮ್ಮನ್ನು ಭಯದಿಂದ ಮುಕ್ತಗೊಳಿಸುವುದು ಶಿಕ್ಷಣದ ಕಾರ್ಯವಲ್ಲವೆ? ಆವಶ್ಯಕವಾಗಿ, ಗಾಢವಾಗಿ ಅದೇ ಶಿಕ್ಷಣದ ಮತ್ತು ಪ್ರತಿಯೊಬ್ಬ ಶಿಕ್ಷಕನ ಆದ್ಯ ಧ್ಯೇಯ. ಬಾಲ್ಯದಿಂದಲೂ ನೀವು ಪೂರ್ತಿ ಭಯಮುಕ್ತರಾಗುವಂತೆ ಮಾಡುವ ಮೂಲಕ ಹೊರಜಗತ್ತಿಗೆ ಬುದ್ಧಿವಂತ ಮಾನವನಾಗಿ ನಿಜವಾದ ಮುಂತೊಡಗುವಿಕೆ ಯೊಂದಿಗೆ ಒದಗುವಂತೆ ಮಾಡುವುದು ಶಿಕ್ಷಣದ ಧ್ಯೇಯ. ನೀವು ನಕಲು ಮಾಡುವಾಗ, ಸಂಪ್ರದಾಯಕ್ಕೆ ಬದ್ಧರಾದಾಗ, ಓರ್ವ ರಾಜಕೀಯ ಧುರೀಣ ಅಥವಾ ಧಾರ್ಮಿಕ 'ಸ್ವಾಮಿ'ಯನ್ನು ಅನುಸರಿಸುವಾಗ ಮುಂತೊಡಗುವಿಕೆ ನಾಶವಾಗುತ್ತದೆ.

ಜೆ ಕೃಷ್ಣಮೂರ್ತಿ

ಮನಸ್ಸು ಯಾಕೆ ಕೊಳೆಯುತ್ತದೆ?

ಮನಸ್ಸು ಯಾಕೆ ಕೊಳೆಯುತ್ತದೆ ಎಂದು ಕೇಳಿಕೊಳ್ಳಿ ನಿಜ. ದೇಹಕ್ಕೆ ಇಂದಲ್ಲ, ನಾಳೆ ಸಾವು ಖಂಡಿತ. ಆದರೆ ನಮ್ಮಲ್ಲಿ ಅನೇಕರ ಮನಸ್ಸುಗಳು ಈಗಾಗಲೇ ಸತ್ತಿವೆ. ಕೊಳೆಯುವ ಕ್ರಿಯಯು ಆಗಲೇ ನಡೆದು ಹೋಗಿದೆ. ಮನಸ್ಸುಗಳು ಕೊಳೆಯುವುದು ಯಾಕೆ? ಸತತವಾಗಿ ಉಪಯೋಗಿಸುವುದರಿಂದ ಭೌತಿಕರಚನೆಯಾದ ದೇಹವು ಸವೆಯುತ್ತದೆ. ಕೊಳೆಯುತ್ತದೆ. ರೋಗ, ಅಪಘಾತ, ವದ್ಧಾಪ್ಯ, ಕೆಟ್ಟ ಆಹಾರ, ಅನುವಂಶಿಕ ಸಂಗತಿಗಳು ಇವೆಲ್ಲ ದೇಹದ ಅವನತಿಗೆ ಮತ್ತು ಸಾವಿಗೆ ಕಾರಣವಾಗುವ ಅಂಶಗಳು. ಆದರೆ ಮನಸ್ಸು ಯಾಕೆ ಕೊಳೆಯಬೇಕು? ಮಂಕುತನ, ಮುದಿತನ ಮತ್ತು ಹಾಗೂ ಭಾರಗಳು ಅದನ್ನು ಯಾಕೆ ಆವರಿಸಬೇಕು?

ಹೆಣವನ್ನು ನೋಡಿದಾಗ ನೀವು ಇದೆಲ್ಲದರ ಬಗ್ಗೆ ಆಲೋಚಿಸಿಲ್ಲವೇ? ದೇಹಗಳು ನಾಶವಾಗುವುದು ಅನಿವಾರ್ಯವಾದರೂ ಮನಸ್ಸಿನ ಅವನತಿ ಎಂದಾದರೂ ಯಾಕೆ ಜರುಗಬೇಕು? ಈ ಪ್ರಶ್ನೆಯು ನಿಮ್ಮ ಮನಸ್ಸಿನಲ್ಲಿ ಮೂಡಿಯೇ ಇಲ್ಲವೇ? ಹೌದು.

ಮನಸ್ಸು ನಿಜವಾಗಿಯೂ ಕೊಳೆಯುತ್ತದೆ. ಈ ಪ್ರಕ್ರಿಯೆಯನ್ನು ಮುದುಕರಲ್ಲಿ ಮಾತ್ರವಲ್ಲ. ತರುಣರಲ್ಲಿಯೂ ನೋಡಬಹುದು. ಯುವಕ ಯುವತಿಯರ ಮನಸ್ಸುಗಳು ನಿಧಾನವಾಗಿ ಸಂವೇದನೆ ಶೂನ್ಯವೂ ಜಡವೂ, ನಿಸ್ತೇಜವೂ ಆಗುತ್ತಿರುವುದನ್ನು ನಾವು ಗಮನಿಸಬಹುದು. ಮನಸ್ಸು ಕೊಳೆಯುವುದರ ಕಾರಣವನ್ನು ನಾವು ಕಂಡುಕೊಂಡರೆ ನಿಜವಾಗಿಯೂ ಅವಿನಾಶಿಯಾದ ಸಂಗತಿಯೊಂದು ನಮ್ಮ ಅರಿವಿನ ಪರಿಧಿಯೊಳಗೆ ಬರಬಹುದು. ಆಗ ಮುಕ್ತಾಯವೇ ಇಲ್ಲದ ಶಾಶ್ವತ ಜೀವನದ ಸ್ವರೂಪವು ನಮಗೆ ಗೋಚರವಾಗಬಹುದು. ಕಾಲದ ತೆಕ್ಕೆಗೆ ಸಿಗದ, ಸ್ಮಶಾನಗಳಿಗೆ ತೆಗೆದುಕೊಂಡುಹೋಗಿ ಭಸ್ಮ ಮಾಡುವ ದೇಹಗಳಂತೆ ನಶಿಸಿಹೋಗದ, ಜೀವದ ಬಗ್ಗೆ ನಾನು ಮಾತನಾಡುತ್ತಿದ್ದೇನೆ.

ಹೌದು. ಮನಸ್ಸು ಕೊಳೆಯುವುದಾದರೂ ಯಾಕೆ? ಈ ಕುರಿತು ಎಂದಾದರೂ ಯೋಚಿಸಿರುವಿರಾ? ನೀವು ಇನ್ನೂ ಎಳೆಯರು. ತಂದೆ-ತಾಯಿ, ಸಮಾಜ ಮತ್ತು ಸಮಯ ಸಂದರ್ಭಗಳು ಈಗಾಗಲೇ ನಿಮಗೆ ಮಂಕು ಹಿಡಿಸದೆ ಇದ್ದರೆ, ನಿಮ್ಮದು ತಾಜಾ ಆದ, ನಿತ್ಯ ಕುತೂಹಲಿಯಾದ, ವಿಸ್ಮಯತುಂಬಿದ ಮನಸ್ಸು. ನಿಮ್ಮ ಮನಸ್ಸಿನ ತುಂಬ ಪ್ರಶ್ನೆಗಳ ಚಿಲುಮೆ. ನಕ್ಷತ್ರಗಳು ಮಿನುಗುವುದೇಕೆ? ಪಕ್ಷಿಗಳು ಸಾಯುವುದೇಕೆ? ಎಲೆಗಳು ಬೀಳುವುದೇಕೆ? ಜೆಟ್ ವಿಮಾನ ಹಾರುವುದು ಹೇಗೆ? ಆದರೆ ಈ ಜೀವಂತ ಕುತೂಹಲ, ಸತ್ಯಶೋಧನೆಯ ಹಂಬಲ ನಿಧಾನವಾಗಿ ಉಸಿರುಕಟ್ಟುತ್ತದೆ. ಅಲ್ಲವೇ? ಭಯ, ಪರಂಪರೆಯ ಭಾರ, ಜೀವನವನ್ನು ಎದುರಿಸಲಾಗದ ನಮ್ಮದೇ ಅಸಾಮರ್ಥ್ಯ ಎಲ್ಲವೂ ಸೇರಿ ಜೀವಂತ ಕುತೂಹಲದ ಕತ್ತುಹಿಚುಕುತ್ತವೆ. ಕಟುಮಾತು, ವ್ಯಂಗ್ಯತುಂಬಿದ ಭಾವಭಂಗಿ, ಪರೀಕ್ಷೆಯ ಭಯ, ಹೆದರಿಸುವ ತಂದೆ ತಾಯಿ ಯಾವುದಾದರೂ ಸರಿ. ಮನಸ್ಸನ್ನು ನಲುಗಿಸಿಬಿಡುತ್ತವೆ.



ಸಂವೇದನಶೀಲತೆಯನ್ನು ಪಕ್ಕಕ್ಕೆ ನೂಕಿ ಮಂಕು ಆವರಿಸಿಕೊಳ್ಳುತ್ತದೆ. ಈ ಮಂಕುತನಕ್ಕೆ ಇನ್ನೊಂದು ಕಾರಣ ಅನುಕರಣೆ. ಪರಂಪರೆಯು ಅನುಕರಣೆ ಮಾಡುವಂತೆ ಒತ್ತಾಯಮಾಡುತ್ತದೆ. ಭೂತಕಾಲದ ಭಾರವು ಅನುಕರಣೆಯನ್ನು ಅಪೇಕ್ಷಿಸುತ್ತದೆ. ತಾನು ತೋರಿಸುವ ಹಾದಿಯಲ್ಲಿ ಹೆಜ್ಜೆ ಹಾಕುವಂತೆ ಮಾಡುತ್ತದೆ. ಇಂಥ ಅನುಸರಣೆಯ ಫಲವಾಗಿ ಮನಸ್ಸಿಗೆ ಕ್ಷೇಮದ, ಸುರಕ್ಷಿತಸ್ಥಿತಿಯ ಭಾವನೆ ಮೂಡುತ್ತದೆ. ನಡೆದುನಡೆದು ಸುಗಮವಾಗಿರುವ ಬಂಡಿ ಜಾಡಿನಲ್ಲಿ, ಅನುಮಾನದ ಲವಲೇಶವೂ ಇಲ್ಲದೆ, ವಿಚಲಿತವಾಗದೆ ಚಲಿಸ ತೊಡಗುತ್ತದೆ. *ನಿಮ್ಮ ಸುತ್ತಲೂ ಇರುವ ವಯಸ್ಕರನ್ನು ಗಮನಿಸಿ. ಅವರ ಮನಸ್ಸಿನ ಸಮಾಧಾನವನ್ನು ಯಾರೂ ಕೆಡಿಸದಿದ್ದರೆ ಅಷ್ಟೆ ಸಾಕು. ಅವರಿಗೆ ಶಾಂತಿ ಬೇಕು. ಅದು ಸಾವಿನ ಶಾಂತಿಯಾದರೂ ಪರವಾಗಿಲ್ಲ.* ಆದರೆ ನಿಜವಾದ ಶಾಂತಿಯು ಸಂಪೂರ್ಣವಾಗಿ ಭಿನ್ನವಾದುದು.

ಅಭ್ಯಾಸವಾಗಿರುವ ವಿನ್ಯಾಸಗಳಲ್ಲಿ ಸ್ಥಿತವಾಗಿರುವ ಮನಸ್ಸು ಸದಾಕಾಲವೂ ಭದ್ರತೆಯನ್ನು ಬಯಸುತ್ತದೆ. ಈ ಸಂಗತಿಯು ನಿಮ್ಮ ಗಮನಕ್ಕೆ ಬಂದಿದೆಯೇ? ಆದ್ದರಿಂದಲೇ ಅಂಥ ಮನಸ್ಸು ಆದರ್ಶವನ್ನು, ಮಾದರಿಗಳನ್ನು ಗುರುವನ್ನು ಅನುಸರಿಸುತ್ತದೆ. ಅದಕ್ಕೆ ಭದ್ರತೆ ಬೇಕು. ತಲೆಕೆಡದಿರುವುದು ಬೇಕು. ಆದ್ದರಿಂದ ಅದು ಅನುಕರಣೆಯಲ್ಲಿ ತೃಪ್ತಿಪಡೆಯುತ್ತದೆ. ಇತಿಹಾಸದ ಪಠ್ಯಪುಸ್ತಕಗಳಲ್ಲಿ ಮಹಾನ್ ನಾಯಕರ, ಸಾಧುಸಂತರ, ಯುದ್ಧವೀರರ ಬಗ್ಗೆ ಓದಿದಾಗ, ಅವನನ್ನು ನಕಲು ಮಾಡಬೇಕೆಂದು ಬಯಕೆ ಮೂಡುವುದಿಲ್ಲವೇ? ಈ ಲೋಕದಲ್ಲಿ ಅಂಥ ಮಹಾನು ಭಾವರು ಇಲ್ಲವೆಂದಲ್ಲ. ಆದರೆ ಯಾರೋ ದೊಡ್ಡಮನುಷ್ಯರನ್ನು ಅನುಕರಿಸಬೇಕು, ಅವರಂತೆ ಆಗಬೇಕು ಎಂಬ ಅನಿಸಿಕೆಯೇ ಮನಸ್ಸಿನ ಅವನತಿಯ ಕಾರಣಗಳಲ್ಲಿ ಒಂದು. ಯಾಕೆಂದರೆ ಆಗ ಮನಸ್ಸು ಪೂರ್ವನಿಶ್ಚಿತವಾದ ಅಚ್ಚುಗಳಲ್ಲಿ ನೆಲೆನಿಲ್ಲುತ್ತದೆ.

ಅಷ್ಟೇ ಅಲ್ಲ. ಸದಾ ಜಾಗೃತರಾದ, ಕುತೂಹಲಿಗಳಾದ, ಕ್ರಾಂತಿಕಾರಿಗಳಾದ ವ್ಯಕ್ತಿಗಳು ಸಮಾಜಕ್ಕೂ ಬೇಡ. ಅಂತಹವರು ಸ್ಥಾಪಿತವಾದ ಸಾಮಾಜಿಕ ವಿನ್ಯಾಸಗಳಲ್ಲಿ ಹೊಂದಿಕೊಳ್ಳದೇ ಅವುಗಳನ್ನು ಮುರಿಯಬಹುದು. ಆದ್ದರಿಂದಲೇ ಸಮಾಜವು ನಿಮ್ಮ ಮನಸ್ಸನ್ನು ತನ್ನ ಚೌಕಟ್ಟಿನಲ್ಲಿ ಸೆರೆಯಿಡಬಯಸುತ್ತದೆ. ಶಿಕ್ಷಣವೆಂದು ಕರೆಯಲಾಗುವ ಸಂಗತಿಯಂತೂ ಅನುಕರಣೆ. ಅನುಸರಣೆ, ಪರಿಪಾಲನೆಗಳನ್ನೇ ಪ್ರೋತ್ಸಾಹಿಸುತ್ತದೆ. ಈಗ ಹೇಳಿ. ಮನಸ್ಸು ಅನುಕರಣೆಯನ್ನು ನಿಲ್ಲಿಸಬಲ್ಲುದೇ? ಎಂದರೆ ಅಭ್ಯಾಸಗಳ ರೂಪಣದಿಂದ ಬಿಡುಗಡೆ ಪಡೆಯಬಲ್ಲುದೇ? ಈಗಾಗಲೇ ಅಭ್ಯಾಸಗಳಿಗೆ ಸೆರೆಸಿಕ್ಕಿರುವ ಮನಸ್ಸು ಅದರಿಂದ ಬಿಡಿಸಿಕೊಳ್ಳಬಲ್ಲುದೇ?

> *ನೀವು ವಿವರಣೆಗಳಲ್ಲಿ ಆಸಕ್ತರಾದರೆ ನನ್ನ ಉತ್ತರದಿಂದ ನಿಮಗೆ ಸಮಾಧಾನವಾಗಿರುವುದಿಲ್ಲ. ಬುದ್ಧಿಶಕ್ತಿಯೆಂದರೇನು ಎಂಬ ಪ್ರಶ್ನೆಗೂ ಜೀವನವೆಂದರೇನು ಎನ್ನುವುದಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ.*
>
> *ಜೆ ಕೃಷ್ಣಮೂರ್ತಿ*

ಮನಸ್ಸು ಅಭ್ಯಾಸಗಳಫಲಿತಾಂಶವೇ ಅಲ್ಲವೇನು? ಅದು ಸಂಪ್ರದಾಯದ, ಕಾಲದ ಫಲಿತಾಂಶ. ಕಾಲವೆನ್ನುವುದು ಗತದ ಮುಂದುವರಿಕೆ, ಅದು ಪುನರಾವರ್ತನೆಗಳ ಸರಣಿ. ಮನಸ್ಸು, *ನಿಮ್ಮ ಮನಸ್ಸು ಆಗಿಹೋಗಿರುವುದರ ಹಿನ್ನೆಲೆಯಲ್ಲಿ ಆಲೋಚಿಸುವುದನ್ನು ನಿಲ್ಲಿಸಬಲ್ಲುದೇ?*

ನಿಮ್ಮ ಮನಸ್ಸು ಅಭ್ಯಾಸಗಳಿಂದ, ಹಾಗೂ ಅಭ್ಯಾಸಗಳ ರೂಪಣ ಕ್ರಿಯೆಯಿಂದ ಸ್ವತಂತ್ರವಾಗುವುದು ಸಾಧ್ಯವೇ? ಈ ಸಮಸ್ಯೆಯನ್ನು ಕುರಿತು ಆಳವಾಗಿ ಚಿಂತಿಸಿದರೆ ಇದು ಸಾಧ್ಯವೆಂದು ನಿಮಗೆ ಮನದಟ್ಟಾಗುತ್ತದೆ. ಹೀಗೆ, ಹೊಸ ವಿನ್ಯಾಸಗಳನ್ನು ಅಭ್ಯಾಸಗಳನ್ನು ರೂಪಿಸಿಕೊಳ್ಳದೆ, ಅನುಕರಣೆಯ ಸವೆದ ದಾರಿಯಲ್ಲಿ ಸಿಕ್ಕಿಕೊಳ್ಳದೆ, ನಿತ್ಯವೂ ನವೀಕರಣಗೊಳ್ಳುವ ಮನಸ್ಸು ಹೊಚ್ಚಹೊಸದಾಗಿ, ತರುಣವಾಗಿ, ಮುಗ್ಧವಾಗಿ ಉಳಿಯುತ್ತದೆ. ಅದಕ್ಕೆ ಅನಂತವಾದ ತಿಳಿವಳಿಕೆಯು ಸಹಜಸಾಧ್ಯವಾಗುತ್ತದೆ.

ಅಂಥ ಮನಸ್ಸಿಗೆ ಸಾವಿಲ್ಲ. ಏಕೆಂದರೆ ಅಲ್ಲಿ ಸ್ಮೃತಿ ಸಂಚಯದ ಪ್ರಕ್ರಿಯೆಯೇ ಇಲ್ಲ. ಇಂಥ ಸಂಚಯದಲ್ಲಿಯೇ ಅನುಕರಣೆ, ಅಭ್ಯಾಸಗಳು ಮನೆಮಾಡಿರುತ್ತವೆ. ಹೀಗೆ ಸಂಗ್ರಹಿಸುವ ಮನಸ್ಸಿಗೆ ಕೊಳೆಯುವಿಕೆ, ಸಾವು ಸಹಜ. ಆದರೆ, ಏನನ್ನೂ ಕೂಡಿ ಹಾಕದೆ, ನೆನಪುಗಳನ್ನು ಗುಡ್ಡೆಮಾಡಿಕೊಳ್ಳದೆ, ಪ್ರತಿದಿನವೂ ಪ್ರತಿಕ್ಷಣವೂ ಸಾಯುತ್ತಿರುವ ಮನಸ್ಸಿಗೆ ಸಾವು ಎಲ್ಲಿಂದ ಬಂತು? ಅದರದು ಅನಂತವಾದ ಅವಕಾಶದಲ್ಲಿ ಮನೆಮಾಡಿರುವ ಸ್ಥಿತಿ.

ಆದ್ದರಿಂದ ಮನಸ್ಸು ತಾನು ಸಂಗ್ರಹಿಸಿಟ್ಟುಕೊಂಡಿರುವ ಎಲ್ಲ ಸಂಗತಿಗಳ ಮಟ್ಟಿಗೂ ಸಾಯಬೇಕು. ಅಭ್ಯಾಸಗಳು, ಅನುಕರಣೆ ಮಾಡಿರುವ ಸುಗುಣಗಳ ಸಮೂಹ, ಭದ್ರತೆಯ ಭಾವಕ್ಕಾಗಿ ತಾನು ಅವಲಂಬಿಸಿರುವ ಎಲ್ಲ ಎಲ್ಲ

ಸಂಗತಿಗಳೂ ಇನ್ನಿಲ್ಲವೆಂಬಂತೆ ಅಳಿಸಿಹೋಗಬೇಕು. ಆಗ ಅದು ತನ್ನದೇ ಆಲೋಚನೆಗಳ ಬಲೆಯಲ್ಲಿ ಸೆರೆಯಾಗುವುದಿಲ್ಲ. ಗತಕಾಲಕ್ಕೆ ಸಾಯುವುದರ ಪರಿಣಾಮವಾಗಿ ಮನಸ್ಸು ಕ್ಷಣ ಕ್ಷಣವೂ ನಿತ್ಯನೂತನವಾಗುತ್ತದೆ. ಆದ್ದರಿಂದ ಅದು ಕೊಳೆಯುವುದಿಲ್ಲ. ಅಥವಾ ಕತ್ತಲಿನ ಅಲೆಗಳ ಚಲನೆಗೆ ಎಡೆಮಾಡಿಕೊಡುವುದಿಲ್ಲ.

ಕೃತಿ: "ಸಂಸ್ಕೃತಿ ಸಂಗತಿ ಅಧ್ಯಾಯ ೧೬
ಅನುವಾದ: ಎಚ್ ಎಸ್ ರಾಘವೇಂದ್ರ ರಾವ್
ಮೂಲ: **Think on These Things**

ನಮ್ಮ ಮನಸ್ಸನ್ನು ತುಂಬಾ ಸರಳವಾಗಿ ಇಟ್ಟುಕೊಳ್ಳುವುದು, ದೊಡ್ಡ ಕಲೆ. ನಮಗೆ ಅಪಾರ ತಿಳಿವಳಿಕೆ ಇರಬಹುದು. ಅನುಭವ ಇರಬಹುದು. ಜೀವನದ ಶ್ರೀಮಂತಿಕೆ, ಈ ಅಸ್ತಿತ್ವದ ಆನಂದ ಹೋರಾಟಗಳು, ನೋವು, ನಗು, ಕಂಬನಿ ಇವೆಲ್ಲವನ್ನೂ ಅನುಭವಿಸಿದ ನಂತರವು ಸರಳವಾದ ಮನಸ್ಸನ್ನು ಕಾಪಾಡಿಕೊಳ್ಳಬೇಕು. ಪ್ರೀತಿಸುವುದು ಹೇಗೆಂದು ಗೊತ್ತಿದ್ದರೆ ಮಾತ್ರ, ಸರಳವಾದ ಮನಸ್ಸನ್ನು ಹೊಂದಿರುವುದಕ್ಕೆ ಸಾಧ್ಯ.

ಜೆ ಕೃಷ್ಣಮೂರ್ತಿ

50 ನೇ ವಾರ್ಷಿಕೋತ್ಸವದ ಸ್ಮರಣಾರ್ಥ

ಕೃಷ್ಣಮೂರ್ತಿ ಅಧ್ಯಯನ ಕೇಂದ್ರವು ಸರಿಯಾಗಿ 2024 ಜನವರಿಗೆ 50 ವರ್ಷ ಪೂರೈಸುತ್ತದೆ.

ಶ್ರೀ ಅನಂತಸ್ವಾಮಿ ಬೆಂಗಳೂರು ಶಿಕ್ಷಣ ಕೇಂದ್ರದ ಇತಿಹಾಸ ಕುರಿತು ಮಾತನಾಡಿದರು ಹಾಗೂ ಶ್ರೀ ಗೋಪಾಲನ್ ಅವರು ಅಧ್ಯಯನ ಕೇಂದ್ರ ಮತ್ತು ಶಾಲೆಯ ಒಳಗೊಳ್ಳುವಿಕೆ ಕುರಿತು ತಮ್ಮ ಅನುಭವ ಹಂಚಿಕೊಂಡರು.

ಸಹ-ಅಧ್ಯಯನ ಶಿಬಿರ, 11 ರಿಂದ 14 ಎಪ್ರೀಲ್ 2024

ವಿಷಯ : "ಸಂಬಂಧದ ಕನ್ನಡಿಯಲ್ಲಿ ಧ್ಯಾನ"

Meditation in the mirror of Relationship.

ಸ್ಪಂದನೆ:9972995800

ಪ್ರಶ್ನಾರ್ಥಿ : ದೇವರು ನಮ್ಮನ್ನು ರಕ್ಷಿಸುತ್ತಾನೆ ಎಂದು ಗೊತ್ತಿದ್ದೂ ನಮಗೇಕೆ ಭಯ ?

ಕೃಷ್ಣಮೂರ್ತಿ : ನಿಮಗೆ ಹಾಗೆ ಹೇಳಲಾಗಿದೆ. ನಿಮ್ಮ ತಂದೆ ತಾಯಿ, ನಿಮ್ಮ ಅಣ್ಣ ಎಲ್ಲ ದೇವರು ನಿಮ್ಮನ್ನು ರಕ್ಷಿಸುತ್ತಾನೆ ಎಂದು ಹೇಳಿದ್ದರು. ಅದೊಂದು ವಿಚಾರ. ನೀವು ಅದಕ್ಕೆ ಅಂಟಿಕೊಳ್ಳುತ್ತೀರಿ. ಆದರೂ ಭಯವಿದೆ. ನಿಮ್ಮಲ್ಲಿ ಈ ವಿಚಾರವಿದ್ದರೂ ದೇವರು ನಿಮ್ಮನ್ನು ಪೊರೆಯುವನು ಎಂಬ ಭಾವನೆ ಇದ್ದರೂ ವಸ್ತುಸ್ಥಿತಿ ಏನೆಂದರೆ ನೀವು ಭಯ ಪಡುತ್ತಿದ್ದೀರಿ. ನಿಮ್ಮ ಭಯ ನಿಜವಾದ ಸಂಗತಿಯೇ ಹೊರತು ದೇವರು ನಿಮ್ಮನ್ನು ಕಾಪಾಡುವನು ಎಂಬುದಲ್ಲ.

ವಾಸ್ತವದಲ್ಲಿ ಏನು ನಡೆಯುತ್ತಿದೆ? ನಿಮ್ಮನ್ನು ನಿಜಕ್ಕೂ ಕಾಪಾಡಲಾಗುತ್ತಿದೆಯಾ? ಹಸಿವಿನಿಂದ ನರಳುತ್ತಿರುವ, ಕಾಪಾಡದೇ ಇರುವ ಲಕ್ಷಾಂತರ ಜನರನ್ನು ನೋಡಿ. ತಲೆಯ ಮೇಲೆ ಭಾರ ಹೊತ್ತ ಹಳ್ಳಿಗರನ್ನು ನೋಡಿ. ಅವರು ಹಸಿದಿದ್ದಾರೆ, ಹರಿದ ಮಾಸಲು ಬಟ್ಟೆ ತೊಟ್ಟಿದ್ದಾರೆ. ಅವರನ್ನು ದೇವರು ರಕ್ಷಿಸಿದ್ದಾನಾ?

ಈ ಜಗತ್ತಿನಲ್ಲಿ ಲಕ್ಷಾಂತರ ಜನ ಅಶನ, ವಸನ, ವಸತಿ ಇಲ್ಲದೆ ನರಳುತ್ತಿದ್ದಾರೆ. ಆದರೆ ನಿಮ್ಮಲ್ಲಿ ಅಧಿಕ ಹಣವಿದೆ, ಸಾಮಾಜಿಕ ಸ್ಥಾನಮಾನ ಇದೆ, ನಿಮ್ಮ ತಂದೆ ಓರ್ವ ಅಧಿಕಾರಿ ಅಥವಾ ಕಲೆಕ್ಟರ್ ಅಥವಾ ಅನ್ಯರನ್ನು ಜಾಣತನದಿಂದ ವಂಚಿಸಿದ ವ್ಯಾಪಾರಿ ಎಂಬ ಕಾರಣಕ್ಕೆ ನಿಮ್ಮನ್ನು ಮಾತ್ರ ದೇವರು ರಕ್ಷಿಸಬೇಕೇ? ಪ್ರಭುತ್ವ, ಉದ್ಯೋಗದಾತರು, ಸಮಾಜ, ದೇವರು - ಬಡವರು ಹಾಗೂ ಹಸಿದವರನ್ನು ಕಾಪಾಡುತ್ತಾರೆ ಎಂದು ನೀವು ಭರವಸೆ ತಳೆದಿದ್ದೀರಿ; ಆದರೆ ಅವರಿಗೆ ರಕ್ಷಣೆ ಇಲ್ಲ. ದೇವರು ನಿಮ್ಮನ್ನು ಕಾಪಾಡುತ್ತಾನೆ ಎಂದು ನೀವು ಆಲೋಚಿಸಬಯಸಿದರೂ ನಿಜಕ್ಕೂ ಇಲ್ಲಿ ಯಾವ ರಕ್ಷಣೆಯೂ ಇಲ್ಲ. ಅದು ನಿಮ್ಮ ಭಯವನ್ನು ಶಮನಗೊಳಿಸಲು ಬಳಸುವ ನಯವಾದ ಪದವಷ್ಟೇ. ಏಕೆಂದರೆ ನೀವು ಯಾವುದನ್ನೂ ಪ್ರಶ್ನಿಸದೆ ದೇವರನ್ನು ಮಾತ್ರ ನಂಬುತ್ತೀರಿ. ದೇವರು ನಿಮ್ಮನ್ನು ರಕ್ಷಿಸುತ್ತಾನೆ ಎಂಬ ವಿಚಾರದಲ್ಲಿ ಯಾವ ಹುರುಳೂ ಇಲ್ಲ. ನೀವು ಈ ಭಯದ ಒಟ್ಟು ಸಮಸ್ಯೆಯ ಆಳಕ್ಕಿಳಿದರೆ ಆಗ ದೇವರು ನಿಮ್ಮನ್ನು ರಕ್ಷಿಸುತ್ತಾರೋ ಇಲ್ಲವೋ ಎಂಬುದನ್ನು ಕಂಡುಕೊಳ್ಳುವಿರಿ. ಪ್ರೀತಿಯ ಭಾವ ಇರುವಲ್ಲಿ ಭಯವಿಲ್ಲ; ಶೋಷಣೆ ಇಲ್ಲ, ಸಮಸ್ಯೆಯೂ ಇಲ್ಲ.

ಕೃತಿ: ಹೊಸ ಬದುಕಿಗೆ ಅಭಿಮುಖವಾಗಿ
ಅನುವಾದ: ಡಾ. ಶ್ರೀ ಮಹಾಬಲೇಶ್ವರ ರಾವ್
ಮೂಲ: "Life Ahead"



WHAT ARE YOU DOING WITH YOUR LIFE?



KRISHNAMURTI TO HIMSELF



LEAVING SCHOOL ENTERING LIFE

ಈ ಹೊಸ ಪುಸ್ತಕಗಳು ವಸಂತ ಪ್ರಕಾಶನ ಹಾಗು ಎಲ್ಲಾ ಪ್ರಸ್ತುತ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿರುತ್ತವೆ. ತಿಂಗಳ ಮೊದಲ ಭಾನುವಾರದ ಸಂವಾದ ಸಭೆಯ ಬಳಿಕ ಶಾಲಾ ಆವರಣದಲ್ಲಿ ಹಾಗೂ ಕೃಷ್ಣಮೂರ್ತಿ ಅಧ್ಯಯನ ಕೇಂದ್ರದಲ್ಲಿ ಕೃತಿಗಳು ಲಭ್ಯವಿರುತ್ತವೆ.

ಬೆಂಗಳೂರು ಅಧ್ಯಯನ ಕೇಂದ್ರದ ಪ್ರಕಟಣೆ

Retreat Schedule 2023 - 2024.

Feb: 8-11th	Silence -Stillness- Meditation
March: 14-17th	Why do I get Angry?
April: 4-7th	Dealing with Stress, Anxiety, Worry and Inner Conflict
April: 11-14th	Meditation in the mirror of Relationship. (KANNADA)

ಮರು ಮುದ್ರಣವಾಗಿರುವ ಕನ್ನಡ ಪುಸ್ತಕಗಳು

THE BOOK OF LIFE | COMMENTARIES ON LIVING – V-1 | THE FIRST AND LAST FREEDOM | THE WORLD WITHIN | MEDITATIONS

ಕನ್ನಡ ಪುಸ್ತಕಗಳು ೨೦% ರಿಯಾಯಿತಿ ಬೆಲೆಯಲ್ಲಿ ಹಾಗೂ ಆಂಗ್ಲ ಪುಸ್ತಕಗಳು ೪೦% ರಿಯಾಯಿತಿ ಬೆಲೆಯಲ್ಲಿ ಮತ್ತು KFI ಪ್ರಕಟಿತ ಕನ್ನಡ ಪುಸ್ತಕಗಳು ೫೦% ರಿಯಾಯಿತಿಯಲ್ಲಿ ಲಭ್ಯವಿರುತ್ತವೆ.

ಕನ್ನಡದಲ್ಲಿ ಲಭ್ಯವಿರುವ ಜೆ.ಕೃಷ್ಣಮೂರ್ತಿ ಪುಸ್ತಕಮಾಲೆ

೧. ಜೆ.ಕೆ. ಜೀವನ – ದರ್ಶನ
ಅನು. ಡಾ. ನಿ. ಮುರಾರಿ ಬಲ್ಲಾಳ ರೂ.೧೩೦/-

೨. ಧ್ಯಾನ ಚಿಂತನ
ಅನು. ಡಾ. ನಿ. ಮುರಾರಿ ಬಲ್ಲಾಳ ರೂ. ೫೦/-

೫. ಶಿಕ್ಷಣ ಮತ್ತು ಜೀವನ
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್ ರೂ. ೬೫/-

೬. ಅನುದಿನ ಚಿಂತನ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೪೦೦/-

೭. ಹಿಂಸೆಯನ್ನು ಮೀರಿ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೧೫೦/-

೮. ಭಯ, ಸ್ವಾತಂತ್ರ್ಯ ಮತ್ತು ಶಿಕ್ಷಣ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೦/-

೧೫. ಬಾಳಿಗೊಂದು ಭಾಷ್ಯ - ಸಂಪುಟ ೧
ಅನು. ಡಾ. ಮಹಾಬಲೇಶ್ವರ ರಾವ್ ರೂ.೩೨೦/-

೧೬. ಬಾಳಿಗೊಂದು ಭಾಷ್ಯ - ಸಂಪುಟ ೨
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೫೦/-

೧೭. ಬಾಳಿಗೊಂದು ಭಾಷ್ಯ - ಸಂಪುಟ ೩
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೮೫/-

೧೮. ಮೊದಲ ಹಾಗೂ ಕೊನೆಯ ಬಿಡುಗಡೆ
ಅನು. ರುಕ್ಮಿಣಿ ಕೃಷ್ಣಮೂರ್ತಿ ರೂ.೩೫೦/-

೧೯. ಭಯ ನಿಮಗೇನು ಮಾಡೀತು?
ಅನು. ಎಸ್. ದಿವಾಕರ್ ರೂ.೪೦/-

೨೦. ಇನ್ನೊಬ್ಬರ ಬಗ್ಗೆ ಕಾಳಜಿ - ಹಾಗೆಂದರೇನು?
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್ ರೂ.೪೦/-

೨೧. ಸ್ವಾತಂತ್ರ್ಯ ಎಂದರೇನು?
ಅನು. ಗಿರೀಶ್ ವಾಫ್ ರೂ.೪೦/-

೨೨. ಶಿಕ್ಷಣ
ಅನು. ಎಸ್.ಡಿ. ಕಾಶೀಕರ ರೂ.೯೦/-

೨೩. ಬದುಕಿನ ಕಡೆಗೆ
ಅನು. ಎಸ್.ಡಿ. ಕಾಶೀಕರ ಮತ್ತು
ವನಮಾಲಾ ಆರ್. ರಾವ್ ರೂ.೧೪೦/-

೨೫. ನೀವೇ ಲೋಕ, ನಿಮ್ಮೊಳಗೇ ಲೋಕ
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೦೦/-

೩೫. ಒಲವು ಒಂಟಿತನ
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೫೦/-

೩೬. ಸಂಕಷ್ಟಮಯ ಜಗತ್ತಿನ ಜೊತೆ ಮುಖಾಮುಖಿ
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೫೦/-

೩೭. ಒಳಜಗತ್ತು
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೮೦/-

೩೮. ಸಾಮಾಜಿಕ ಜವಾಬ್ದಾರಿ
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೧೦/-

೩೯. ಶಿಕ್ಷಕನಿಗೆ ಶಿಕ್ಷಣ
ಅನು. ಡಾ. ಬಿ.ಬಿ. ರಾಜಪುರೋಹಿತ್ ರೂ. ೫೦/-

೩೦. ನಿಮ್ಮ ಜೀವನ ನಿಮ್ಮ ಕೈಯಲ್ಲಿದೆಯೆ? ರೂ. ೨೦೦/-
ಅನು. ಡಾ. ಮಹಾಬಲೇಶ್ವರ ರಾವ್

೩೧. ಲೋಕ ಶಿಕ್ಷಕ
ಅನು. ಡಾ. ಮಹಾಬಲೇಶ್ವರ ರಾವ್ ರೂ.೨೫೦/-

೩೨. ಕೃಷ್ಣಮೂರ್ತಿ ಆತ್ಮಸಂಗಾತ ರೂ. ೧೩೦/-
ಅನು. ಡಾ. ಮಹಾಬಲೇಶ್ವರ ರಾವ್

೩೩. ಮುಗಿದ ಶಾಲೆ ತೆರೆದ ಜೀವನ ರೂ.೨೧೦/-
ಅನು. ಡಾ. ಮಹಾಬಲೇಶ್ವರ ರಾವ್



ಕನ್ನಡ ಭಾಷಾಂತರ ಸಮಿತಿ ಸದಸ್ಯರು:
ಡಾ|| ಎಚ್. ಎಸ್. ರಾಘವೇಂದ್ರರಾವ್
ಪ್ರೊ|| ಓ. ಎಲ್. ನಾಗಭೂಷಣ ಸ್ವಾಮಿ
ಡಾ|| ವನಮಾಲಾ ವಿಶ್ವನಾಥ್

Published by:
Editor: Smt. Sushama Inamdar
The Study Bangalore Education Centre
Krishnamurti Foundation India
Thataguni Post, Bangalore - 560082

Contact Information:
Mob: 8317419451
Email: kfistudy@gmail.com
Website: www.kfistudy.org